## ಇಂದಿರಾ ವಿಕಾಸ ಪತ್ರದ ಖರೀದಿ ಬಗ್ಗೆ ಪ್ರಗತಿ ವಂತ್ತು ಬಿಚತ್ ತಾಲ್ಲೂಕಿನ ವಿವರ.

೧೧೩. ಶ್ರೀ ಬಿ.ಎಸ್. ದಂಡಿಯಂಊರಪ್ಪ (ಶಿಕಾರಿ ಪುರ).—ಮಾನ್ಯ ಹಣಕಾಸು ಸಣ್ಣ ಉಳಿತಾಯ ಮತ್ತು ಬಂದೀಖಾನೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂದಿರಾ ವಿಕಾಸ ಪತ್ರಗಳ ಮಾರಾಟದಿಂದ ಈ ವರ್ಷದಲ್ಲಿ ಸಾಧಿಸಿದ ಜಿಲ್ಲಾವಾರು ಪ್ರಗತಿಯೇನು ?

ಆ) ಈ ರೀತಿ ಇಂದಿರಾ ವಿಕಾಸ ಪತ್ರಗಳ ಮಾರಾಟದ ಮೇಲೆ ಕೇಂದ್ರ ಸರ್ಕಾರದಿಂದ ಪಡೆದಿರುವ ಸಾಲವೆಷ್ಟು ?

ಇ) ಸಣ್ಣ ಉಳಿತಾಯ ಯೋಜನೆಯಲ್ಲಿ '' ಬೃಹತ್ '' ತಾಲ್ಲೂಕೆಂದು ಗುರುತಿಸಿರುವ ತಾಲ್ಲೂಕುಗಳ ಹೆಸರು ಹಾಗೂ ಈವರೆಗೆ ಇಂತಹ ತಾಲ್ಲೂಕುಗಳಿಗೆ ಸರ್ಕಾರದಿಂದ ಕೊಟ್ಟಿರುವ ಹೆಚ್ಚಿನ ಸೌಲಭ್ಯಗಳೇನು ?

ಶ್ರೀ ವೀರಣ್ಣ (ಹಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಯ ರಾಜ್ಯ ಸಚಿವರು).—

ಅ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಡಿಸೆಂಬರ್ ೮೭ರ ಅಂತ್ಯದವರೆಗೆ ಇಂದಿರಾವಿಕಾಸ ಪತ್ರಗಳ ಮಾರಾಟದಿಂದ ಒಟ್ಟು ಸಂಗ್ರಹಣೆ ರೂ. ೫೨ ೮೪ ಕೋಟಿ. ಸಾಧಿಸಿದ ಜಿಲ್ಲಾವಾರು ಪ್ರಗತಿಯನ್ನು ಈ ಕೆಳಗೆ ನಮೂದಿಸಿದೆ.—

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | | ಸಂಗ್ರಹಿಸಿದ ಮೊಬಲಗು (ರೂ.ಗಳು ಕೋಟಿಗಳಲ್ಲಿ) |
|---|---|---|---|
| ೧ | ಬೆಂಗಳೂರು | ... | ೧೫.೫೨ |
| ೨ | ತುಮಕೂರು | ... | ೨.೧೨ |
| ೩ | ಕೋಲಾರ | ... | ೨.೪೧ |
| ೪ | ಚಿತ್ರದುರ್ಗ | ... | ೧.೬೨ |
| ೫ | ಶಿವಮೊಗ್ಗ | ... | ೧.೮೭ |
| ೬ | ಮೈಸೂರು | ... | ೩.೫೪ |
| ೭ | ಮಂಡ್ಯ | ... | ೧.೫೫ |
| ೮ | ಕೊಡಗು | ... | ೦.೩೨ |
| ೯ | ದಕ್ಷಿಣ ಕನ್ನಡ | ... | ೩.೪೨ |
| ೧೦ | ಹಾಸನ | ... | ೧.೫೮ |
| ೧೧ | ಚಿಕ್ಕಮಗಳೂರು | ... | ೦.೫೩ |
| ೧೨ | ಬೆಳಗಾವಿ | ... | ೨.೯೭ |
| ೧೩ | ಬಿಜಾಪುರ | ... | ೨.೦೦ |
| ೧೪ | ಧಾರವಾಡ | ... | ೩.೬೦ |
| ೧೫ | ಉತ್ತರ ಕನ್ನಡ | ... | ೧.೫೪ |
| ೧೬ | ಗುಲಬರ್ಗಾ | ... | ೨.೦೦ |
| ೧೭ | ಬಳ್ಳಾರಿ | ... | ೩.೧೦ |
| ೧೮ | ರಾಯಚೂರು | ... | ೧.೪೦ |
| ೧೯ | ಬೀದರ್ | ... | ೧ ೭೫ |
| | | ಒಟ್ಟು | ೫೨.೮೪ |

ಅ) ಇಂದಿರಾ ವಿಕಾಸ ಪತ್ರಗಳ ಮಾರಾಟದ ಮೇಲೆ ಕೇಂದ್ರ ಸರ್ಕಾರವು ಹಣವನ್ನು ಸಾಲದ ರೂಪದಲ್ಲಿ ಪ್ರತ್ಯೇಕವಾಗಿ ನೀಡುವುದಿಲ್ಲ.

ಇ) ಮೈಸೂರು ಜಿಲ್ಲೆಯ ಯಳಂದೂರು ತಾಲ್ಲೂಕು, ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ಕೊಪ್ಪ, ತರೀಕೆರೆ ನರಸಿಂಹರಾಜಪುರ ಮತ್ತು ಕಡೂರು ತಾಲ್ಲೂಕುಗಳನ್ನು ''ಬಚತ್'' ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಸರ್ಕಾರವು ''ಬಚತ್'' ತಾಲ್ಲೂಕುಗಳೆಂದು ಘೋಷಿಸಿ ಈ ತಾಲ್ಲೂಕುಗಳ ಸೇವೆಯನ್ನು ಪ್ರಶಂಸಿದೆ.

## ಕರ್ನಾಟಕದಲ್ಲಿ ಸೇಂದಿ ಮರಗಳ ಸಂಖ್ಯೆ ಹಾಗೂ ಅದರಿಂದ ಬರುವ ಆದಾಯ

೨೦. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸೇಂದಿ ಮರಗಳ ಸಂಖ್ಯೆ ಎಷ್ಟು ಹಾಗೂ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮರಗಳಿವೆ ?

ಆ) ಒಂದು ದಿನಕ್ಕೆ ಎಷ್ಟು ಲೀಟರ್ ಸೇಂದಿ ದೊರೆಯುತ್ತದೆ ?

ಇ) ಸೇಂದಿ ಮಾರಾಟದಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ?

ಈ) ಸೇಂದಿಯಲ್ಲಿ ಕಲಬೆರಕೆಯಾಗುತ್ತಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಕಲಬೆರಕೆ ಮಾರುವವರ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಬಿ ಇನಾಂದಾರ್ (ಮಾನ್ಯ ಅಬಕಾರಿ ಸಚಿವರು),—

ಅ) ಜಿಲ್ಲಾವಾರು ಸೇಂದಿ ಮರಗಳಿಂದ ಸೇಂದಿಯನ್ನು ಉತ್ಪಾದಿಸಿ ಮಾಡಿದ ವಿವರಣೆಯನ್ನು ಅನುಬಂಧ-೧ರಲ್ಲಿ ಕೊಡಲಾಗಿದೆ.

ಆ) ೧೯೮೬-೮೭ನೇ ಸಾಲಿನಲ್ಲಿ ಸರಾಸರಿ ಸುಮಾರು ೪.೮೬ ಲಕ್ಷ ಲೀಟರ್‌ಗಳಷ್ಟು ಸೇಂದಿ ಪ್ರತಿದಿನ ದೊರೆಯುತ್ತದೆ.

ಇ) ೧೯೮೬-೮೭ನೇ ಸಾಲಿನಲ್ಲಿ ೪೯.೮೪ ಕೋಟಿ ರೂಪಾಯಿಗಳು.

ಈ) ಕೆಲವೊಂದು ದೂರುಗಳು ಈ ವಿಷಯದಲ್ಲಿ ಬಂದಿರುವುದು.

ಉ) ಅಬಕಾರಿ ಕಾಯಿದೆ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ.